# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : | 504 |
| ಸದಸ್ಯರ ಹೆಸರು : | ಶ್ರೀ ಡಿ.ಟಿ. ಶ್ರೀನಿವಾಸ್ ( ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 30.01.2026 |
| ಉತ್ತರಿಸುವ ಸಚಿವರು : | ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ 03 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಹಾಗೂ 11 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಿದ್ಯಾರ್ಥಿನಿಲಯಗಳು/ ವಸತಿ ಶಾಲೆಗಳ ಸಂಖ್ಯೆ ಹಾಗೂ ಸದರಿ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ಅಲೆಮಾರಿ/ ಅರೆ ಅಲೆಮಾರಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಬಾಲಕ/ಬಾಲಕಿಯರ ಪ್ರತ್ಯೇಕ ಮಾಹಿತಿ ನೀಡುವುದು) | |
| ಇ) | ವಿದ್ಯಾಭ್ಯಾಸ ವಂಚಿತರಾಗದಂತೆ ಎಲ್ಲಾ ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಪ್ರವೇಶ ನೀಡಲಾಗಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗಾಗಿಯೇ ಕಾರ್ಯನಿರ್ವಹಿಸುತ್ತಿರುವ 03 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 11 ವಸತಿಶಾಲೆಗಳಿಗೆ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ.<br><br>ಮುಂದುವರೆದು, ಅಲೆಮಾರಿ/ಅರೆ ಅಲೆಮಾರಿ ಸಮುದಾಯವು ಹಿಂದುಳಿದ ವರ್ಗಗಳ ಪ್ರವರ್ಗ-1ರಡಿಯಲ್ಲಿ ಬರುವುದರಿಂದ, ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಶೇಕಡ 10 ರ ಮೀಸಲಾತಿಯನ್ವಯ ಅಲೆಮಾರಿ/ ಅರೆ ಅಲೆಮಾರಿ ವಿದ್ಯಾರ್ಥಿಗಳಿಗೂ ಪ್ರವೇಶ ನೀಡಲಾಗಿರುತ್ತದೆ. |
| ಈ) | ನೀಡದೇ ಇದ್ದಲ್ಲಿ, ಎಷ್ಟು ವಿದ್ಯಾರ್ಥಿಗಳಿಗೆ ನೀಡಿರುವುದಿಲ್ಲ; (ಜಿಲ್ಲಾವಾರು ಮಾಹಿತಿ ನೀಡುವುದು) | ಅಲೆಮಾರಿ/ಅರೆ ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿ ಸಂಖ್ಯೆಯು 375 ಇದ್ದು, ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗಿರುತ್ತದೆ. ಒಟ್ಟು 33 ಅರ್ಜಿಗಳು ಬಾಕಿ ಇರುತ್ತವೆ. |

| | | |
|---|---|---|
| | | ಡಿ.ದೇವರಾಜ ಅರಸು (ಅಲೆಮಾರಿ/ಅರೆ ಅಲೆಮಾರಿ) ವಸತಿ ಶಾಲೆಗಳಲ್ಲಿ ಪ್ರವೇಶ ಕೋರಿ ಬಂದಿರುವ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.<br><br>ಮುಂದುವರೆದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ಜಿಲ್ಲಾವಾರು ಅರ್ಜಿಗಳನ್ನು ಆಹ್ವಾನಿಸಿ, ಕೌನ್ಸಿಲಿಂಗ್ ಮೂಲಕ ಪ್ರವೇಶವನ್ನು ನೀಡಲಾಗುತ್ತದೆ. ಅಲೆಮಾರಿ/ಅರೆ ಅಲೆಮಾರಿ ವಸತಿಶಾಲೆಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಆಹ್ವಾನಿಸದೇ ಇರುವುದರಿಂದ, ಬಾಕಿ ಇರುವ ಅರ್ಜಿಗಳ ಮಾಹಿತಿಯು ಲಭ್ಯವಿರುವುದಿಲ್ಲ. |
| ಉ) | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಲೆಮಾರಿ ಜನಾಂಗಕ್ಕೆ ನೀಡಿದಂತೆ ಹಿಂದುಳಿದ ಅಲೆಮಾರಿ ಜನಾಂಗದವರಿಗೂ ಶಿಕ್ಷಣ ಸೌಲಭ್ಯ ನೀಡುವಲ್ಲಿ ಸರ್ಕಾರದ ನೀತಿ ನಿರೂಪಣೆಗಳೇನು? (ವಿವರ ಸಲ್ಲಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಬಿಸಿಎ 2007, ದಿನಾಂಕ 02.06.2007ರಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1ರಡಿಯಲ್ಲಿ ಬರುವ ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ವಿಶೇಷ ಕೋಶವೊಂದನ್ನು ಸೃಷ್ಟಿಸಿ, ಸದರಿ ಕೋಶದ ಮುಖಾಂತರ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ:<br>1. ಮೆಟ್ರಿಕ್ ಪೂರ್ವ ವಿಶೇಷ ಪ್ರೋತ್ಸಾಹಧನ<br>2. ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ<br>3. ಡಿ.ದೇವರಾಜ ಅರಸು ವಸತಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ<br>4. ಮೂಲಭೂತ ಸೌಕರ್ಯಗಳು<br>5. ವಸತಿ ಯೋಜನೆ<br><br>ಮುಂದುವರೆದು, ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. 04 ಡಿ.ದೇವರಾಜ ಅರಸು ವಸತಿ ಶಾಲೆಗಳ (ಅಲೆಮಾರಿ/ಅರೆ ಅಲೆಮಾರಿ) ನಿರ್ವಹಣೆ<br>2. 03 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ<br>3. 04 ಡಿ.ದೇವರಾಜ ಅರಸು ವಸತಿ ಶಾಲೆಗಳ (ಅಲೆಮಾರಿ/ಅರೆ ಅಲೆಮಾರಿ) ನಿರ್ವಹಣೆ (ಕ್ರೈಸ್ ವತಿಯಿಂದ)<br>4. 03 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆ (ಕ್ರೈಸ್ ವತಿಯಿಂದ)<br>5. ಮೆಟ್ರಿಕ್ ಪೂರ್ವ 01 ರಿಂದ 08ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.2000/- ಹಾಗೂ 09 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ರೂ.4000/-ಗಳ ವಿಶೇಷ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. |

| | | |
|---|---|---|
| | | 6. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ದರಗಳಲ್ಲಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.<br>i. ಗ್ರೂಪ್ ಎ ಕೋರ್ಸ್‌ಗಳು – ರೂ.20,000/-<br>ii. ಗ್ರೂಪ್ ಬಿ ಕೋರ್ಸ್‌ಗಳು –ರೂ.13,000/-<br>iii. ಗ್ರೂಪ್ ಸಿ ಕೋರ್ಸ್‌ಗಳು – ರೂ.8,000/-<br>iv. ಗ್ರೂಪ್ ಡಿ ಕೋರ್ಸ್‌ಗಳು – ರೂ.5000/- |

**ಸಂಖ್ಯೆ**:ಹಿಂವಕ 114 ಬಿಂಎಂಎಸ್ 2026

**( ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು
ಸಂಸ್ಕೃತಿ ಇಲಾಖೆ ಸಚಿವರು.

## ಮಾನ್ಯ ವಿಧಾನಪರಿಷತ್ತು ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ್(ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 504ಕ್ಕೆ ಅನುಬಂಧ

| ಕ್ರ ಸಂ. | ಜಿಲ್ಲೆಯ ಹೆಸರು | ವಸತಿಶಾಲೆಯ ವಿವರ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | | | | ಬಾಲಕ | ಬಾಲಕಿ | ಒಟ್ಟು |
| 1. | ಚಿಕ್ಕಮಗಳೂರು | ಡಿ.ದೇವರಾಜ ಅರಸು ವಸತಿಶಾಲೆ, ರಾಜಾಜಿನಗರ, ಬೀರೂರು | **125** | 79 | 46 | **125** |
| 2. | ಬೆಳಗಾವಿ | ಡಿ.ದೇವರಾಜ ಅರಸು ವಸತಿಶಾಲೆ, ಗೋಕಾಕ್ | **125** | 83 | 42 | **125** |
| 3. | ಕಲಬುರಗಿ | ಡಿ.ದೇವರಾಜ ಅರಸು ವಸತಿಶಾಲೆ, ಆಳಂದ ಚೆಕ್‌ಪೋಸ್ಟ | **125** | 66 | 59 | **125** |
| 4. | ಕೊಪ್ಪಳ | ಡಿ.ದೇವರಾಜ ಅರಸು ವಸತಿಶಾಲೆ, ತಾವರಗೇರಾ, ಕುಷ್ಟಗಿ | **125** | 69 | 56 | **125** |
| 5. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (BCWD1830) | **125** | 0 | 125 | **125** |
| 6. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (BCWD2195) | **125** | 0 | 125 | **125** |
| 7. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ (BCWD2315) | **125** | 125 | 0 | **125** |
| 8. | ಬಳ್ಳಾರಿ | ಮೊರಾರ್ಜಿ ದೇಸಾಯಿ ವಸತಿಶಾಲೆ (BC343), ಜೋಳದರಾಶಿ | **280** | 149 | 119 | **268** |
| 9. | ಚಿತ್ರದುರ್ಗ | ಮೊರಾರ್ಜಿ ದೇಸಾಯಿ ವಸತಿಶಾಲೆ (BC36), ಹನುಮಂತದೇವರ, ಹೊಳಲ್ಕೆರೆ | **250** | 117 | 122 | **239** |
| 10. | ಹಾಸನ | ಮೊರಾರ್ಜಿ ದೇಸಾಯಿ ವಸತಿಶಾಲೆ (BC168), ಹಳೇಬೀಡು | **250** | 126 | 87 | **213** |
| 11. | ಬೆಳಗಾವಿ | ಡಿ.ದೇವರಾಜ ಅರಸು ವಸತಿಶಾಲೆ (BC865), ಗೋಕಾಕ್ | **60** | 30 | 30 | **60** |
| 12. | ಕೊಪ್ಪಳ | ಡಿ.ದೇವರಾಜ ಅರಸು ವಸತಿಶಾಲೆ (BC866), ಕರಟಗಿ | **60** | 31 | 29 | **60** |
| 13. | ಮೈಸೂರು | ಡಿ.ದೇವರಾಜ ಅರಸು ವಸತಿಶಾಲೆ (BC864), ಹದಿನಾರು | **60** | 8 | 4 | **12** |
| 14. | ತುಮಕೂರು | ಡಿ.ದೇವರಾಜ ಅರಸು ವಸತಿಶಾಲೆ (BC863), ಶಿರಾ | **60** | 30 | 29 | **59** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ್(ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 504ಕ್ಕೆ ಪೂರಕ ಟಿಪ್ಪಣಿ

ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಬಿಸಿಎ 2007, ದಿನಾಂಕ 02.06.2007ರಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-1ರಡಿಯಲ್ಲಿ ಬರುವ ಅಲೆಮಾರಿ/ ಅರೆಅಲೆಮಾರಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಒಂದು ವಿಶೇಷ ಕೋಶವೊಂದನ್ನು ಸೃಷ್ಠಿಸಿ, ಸದರಿ ಕೋಶದ ಮುಖಾಂತರ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿರುತ್ತದೆ:

1. ಮೆಟ್ರಿಕ್ ಪೂರ್ವ ವಿಶೇಷ ಪ್ರೋತ್ಸಾಹಧನ
2. ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿವೇತನ
3. ಡಿ.ದೇವರಾಜ ಅರಸು ವಸತಿಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ
4. ಮೂಲಭೂತ ಸೌಕರ್ಯಗಳು
5. ವಸತಿ ಯೋಜನೆ

ಮುಂದುವರೆದು, ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.

1. 04 ಡಿ.ದೇವರಾಜ ಅರಸು ವಸತಿಶಾಲೆಗಳ (ಅಲೆಮಾರಿ/ಅರೆಅಲೆಮಾರಿ) ನಿರ್ವಹಣೆ
2. 03 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ ನಿರ್ವಹಣೆ
3. 04 ಡಿ.ದೇವರಾಜ ಅರಸು ವಸತಿಶಾಲೆಗಳ (ಅಲೆಮಾರಿ/ಅರೆಅಲೆಮಾರಿ) ನಿರ್ವಹಣೆ (ಕ್ರೈಸ್ ವಸತಿಯಿಂದ)
4. 03 ಮೊರಾರ್ಜಿ ದೇಸಾಯಿ ವಸತಿಶಾಲೆಗಳ ನಿರ್ವಹಣೆ (ಕ್ರೈಸ್ ವಸತಿಯಿಂದ)
5. ಮೆಟ್ರಿಕ್ ಪೂರ್ವ 1ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.2000/- ಹಾಗೂ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ರೂ.4000/- ವಿಶೇಷ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
6. ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಈ ಕೆಳಕಂಡ ದರಗಳಲ್ಲಿ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.

    a. ಗ್ರೂಪ್ ಎ ಕೋರ್ಸ್‌ಗಳು – ರೂ.20,000/-
    b. ಗ್ರೂಪ್ ಬಿ ಕೋರ್ಸ್‌ಗಳು –ರೂ.13,000/-
    c. ಗ್ರೂಪ್ ಸಿ ಕೋರ್ಸ್‌ಗಳು – ರೂ.8,000/-
    d. ಗ್ರೂಪ್ ಡಿ ಕೋರ್ಸ್‌ಗಳು – ರೂ.5000/-

ಹಿಂದುಳಿದ ಅಲೆಮಾರಿ/ಅರೆಅಲೆಮಾರಿ ಜನಾಂಗದ ಶೈಕ್ಷಣಿಕ ಅಭಿವೃದ್ಧಿಗಾಗಿ 03 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 11 ವಸತಿಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳ/ವಸತಿಶಾಲೆಗಳ ಸಂಖ್ಯೆ ಹಾಗೂ ಪ್ರವೇಶ ಪಡೆದಿರುವ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳ ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ಜಿಲ್ಲೆಯ ಹೆಸರು | ವಸತಿಶಾಲೆಯ ವಿವರ | ಮಂಜೂರಾತಿ ಸಂಖ್ಯೆ | ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | | | | ಬಾಲಕ | ಬಾಲಕಿ | ಒಟ್ಟು |
| | ಡಿ.ದೇವರಾಜ ಅರಸು ವಸತಿಶಾಲೆಗಳು (1ರಿಂದ 5ನೇ ತರಗತಿಯವರೆಗೆ) | | | | | |
| 15. | ಚಿಕ್ಕಮಗಳೂರು | ಡಿ.ದೇವರಾಜ ಅರಸು ವಸತಿಶಾಲೆ, ರಾಜಾಜಿನಗರ, ಬೀರೂರು | **125** | 79 | 46 | **125** |
| 16. | ಬೆಳಗಾವಿ | ಡಿ.ದೇವರಾಜ ಅರಸು ವಸತಿಶಾಲೆ, ಗೋಕಾಕ್ | **125** | 83 | 42 | **125** |
| 17. | ಕಲಬುರಗಿ | ಡಿ.ದೇವರಾಜ ಅರಸು ವಸತಿಶಾಲೆ, ಆಳಂದ ಚೆಕ್‌ಪೋಸ್ಟ್ | **125** | 66 | 59 | **125** |
| 18. | ಕೊಪ್ಪಳ | ಡಿ.ದೇವರಾಜ ಅರಸು ವಸತಿಶಾಲೆ, ತಾವರಗೇರಾ, ಕುಷ್ಟಗಿ | **125** | 69 | 56 | **125** |
| | **ಮೆಟ್ರಿಕ್ ನಂತರದ 1 ಬಾಲಕ ಹಾಗೂ 2 ಬಾಲಕಿಯರ ವಿದ್ಯಾರ್ಥಿನಿಲಯಗಳು** | | | | | |
| 19. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (BCWD1830) | **125** | 0 | 125 | **125** |
| 20. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ (BCWD2195) | **125** | 0 | 125 | **125** |
| 21. | ಚಿತ್ರದುರ್ಗ | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ (BCWD2315) | **125** | 125 | 0 | **125** |
| | 03 ಮೊರಾರ್ಜಿ ದೇಸಾಯಿ ವಸತಿಶಾಲೆಗಳು (6ರಿಂದ 10ನೇ ತರಗತಿಯವರೆಗೆ) (ಕ್ರೈಸ್) | | | | | |
| 22. | ಬಳ್ಳಾರಿ | ಮೊರಾರ್ಜಿ ದೇಸಾಯಿ ವಸತಿಶಾಲೆ (BC343), ಜೋಳದರಾಶಿ | **280** | 149 | 119 | **268** |
| 23. | ಚಿತ್ರದುರ್ಗ | ಮೊರಾರ್ಜಿ ದೇಸಾಯಿ ವಸತಿಶಾಲೆ (BC36), ಹನುಮಂತದೇವರ, ಹೊಳಲ್ಕೆರೆ | **250** | 117 | 122 | **239** |
| 24. | ಹಾಸನ | ಮೊರಾರ್ಜಿ ದೇಸಾಯಿ ವಸತಿಶಾಲೆ (BC168), ಹಳೇಬೀಡು | **250** | 126 | 87 | **213** |
| | ಡಿ.ದೇವರಾಜ ಅರಸು ವಸತಿಶಾಲೆಗಳು (6ರಿಂದ 12ನೇ ತರಗತಿಯವರೆಗೆ) (ಕ್ರೈಸ್) | | | | | |
| 25. | ಬೆಳಗಾವಿ | ಡಿ.ದೇವರಾಜ ಅರಸು ವಸತಿಶಾಲೆ (BC865), ಗೋಕಾಕ್ | **60** | 30 | 30 | **60** |

| | | | | | | |
|---|---|---|---|---|---|---|
| 26. | ಕೊಪ್ಪಳ | ಡಿ.ದೇವರಾಜ ಅರಸು ವಸತಿಶಾಲೆ (BC866), ಕರಟಗಿ | 60 | 31 | 29 | 60 |
| 27. | ಮೈಸೂರು | ಡಿ.ದೇವರಾಜ ಅರಸು ವಸತಿಶಾಲೆ (BC864), ಹದಿನಾರು | 60 | 8 | 4 | 12 |
| 28. | ತುಮಕೂರು | ಡಿ.ದೇವರಾಜ ಅರಸು ವಸತಿಶಾಲೆ (BC863), ಶಿರಾ | 60 | 30 | 29 | 59 |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗಾಗಿಯೇ ಕಾರ್ಯನಿರ್ವಹಿಸುತ್ತಿರುವ 03 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 11 ವಸತಿಶಾಲೆಗಳಿಗೆ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ.

ಮುಂದುವರೆದು, ಅಲೆಮಾರಿ/ಅರೆಅಲೆಮಾರಿ ಸಮುದಾಯವು ಹಿಂದುಳಿದ ವರ್ಗಗಳ ಪ್ರವರ್ಗ-1ರಡಿಯಲ್ಲಿ ಬರುವುದರಿಂದ, ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಶೇಕಡಾ 10ರ ಮೀಸಲಾತಿಯನ್ವಯ ಅಲೆಮಾರಿ/ ಅರೆಅಲೆಮಾರಿ ವಿದ್ಯಾರ್ಥಿಗಳಿಗೂ ಪ್ರವೇಶ ನೀಡಲಾಗಿರುತ್ತದೆ.

ಅಲೆಮಾರಿ/ಅರೆಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿ ಸಂಖ್ಯೆಯು 375 ಇದ್ದು, ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗಿರುತ್ತದೆ. 33 ಅರ್ಜಿಗಳು ಬಾಕಿ ಇರುತ್ತವೆ.

ಡಿ.ದೇವರಾಜ ಅರಸು (ಅಲೆಮಾರಿ/ಅರೆಅಲೆಮಾರಿ) ವಸತಿಶಾಲೆಗಳಲ್ಲಿ ಪ್ರವೇಶ ಕೋರಿ ಬಂದಿರುವ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.

ಮುಂದುವರೆದು, ಕ್ರೈಸ್ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ವಸತಿಶಾಲೆಗಳಿಗೆ ಜಿಲ್ಲಾವಾರು ಅರ್ಜಿಗಳನ್ನು ಆಹ್ವಾನಿಸಿ ಕೌನ್ಸಿಲಿಂಗ್ ಮೂಲಕ ಪ್ರವೇಶವನ್ನು ನೀಡಲಾಗುತ್ತದೆ. ಅಲೆಮಾರಿ/ಅರೆಅಲೆಮಾರಿ ವಸತಿಶಾಲೆಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಆಹ್ವಾನಿಸದೇ ಇರುವುದರಿಂದ, ಬಾಕಿ ಇರುವ ಅರ್ಜಿಗಳ ಮಾಹಿತಿಯು ಲಭ್ಯವಿರುವುದಿಲ್ಲ.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.